(119)



**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್. ರುದ್ರೇಗೌಡ ಹಾಗು ಶ್ರೀ ಆಯನೂರು ಮಂಜುನಾಥ್ ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ.**

ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿರುವ ಸರ್ಕಾರದ ಸ್ವಾಮ್ಯದಲ್ಲಿರುವ ಪ್ರತಿಷ್ಠಿತ "ದಿ ಮೈಸೂರು ಪೇಪರ್ ಮಿಲ್" ಲಿ., (ಎಂ.ಪಿ.ಎಂ) ಯು ಎಲ್ಲಾ ರೀತಿ ಸೌಲಭ್ಯ ಹಾಗೂ ಸಂಪನ್ಮೂಲಗಳನ್ನು ಹೊಂದಿದ್ದರೂ, 2016 ರಿಂದ ಸ್ಥಗಿತಗೊಂಡಿರುತ್ತದೆ. ಇದನ್ನೂ ಖಾಸಗೀಕರಣ ಮಾಡಲು ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿ ಎರಡು ವರ್ಷಗಳಾದವು. ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಕಾಗದ ತಯಾರಿಕೆಗೆ ಯೋಗ್ಯವಾದ ಮರದ ತುಂಡುಗಳು ಕಂಪನಿಯ ಆವರಣದಲ್ಲಿ ಗೆದ್ದಲು ಹಿಡಿಯುತ್ತಿರುತ್ತದೆ. ಈ ಕಾರ್ಖಾನೆಗೆ ಪೂರಕ ಕಚ್ಚಾ ವಸ್ತು ಸರಬರಾಜಿಗೆ (ಕಬ್ಬಿನ ಸಿಪ್ಪೆ) ಸ್ಥಾಪಿಸಿದ ಸಕ್ಕರೆ ಕಾರ್ಖಾನೆಯು ಸ್ಥಗಿತವಾಗಿ ಕಬ್ಬು ಬೆಳೆಯುತ್ತಿರುವವರಿಗೂ ತೊಂದರೆಯಾಗಿರುವ ಬಗ್ಗೆ.

**1. ಶಿವಮೊಗ್ಗ ಜಿಲ್ಲೆಯಲ್ಲಿರುವ ಸರ್ಕಾರದ ಸ್ವಾಮ್ಯದಲ್ಲಿರುವ ಪ್ರತಿಷ್ಠಿತ "ದಿ ಮೈಸೂರು ಪೇಪರ್ ಮಿಲ್" ಲಿ., (ಎಂ.ಪಿ.ಎಂ) ಯು ಎಲ್ಲಾ ರೀತಿ ಸೌಲಭ್ಯ ಹಾಗೂ ಸಂಪನ್ಮೂಲಗಳನ್ನು ಹೊಂದಿದ್ದರೂ, 2016ರಿಂದ ಸ್ಥಗಿತಗೊಂಡಿರುತ್ತದೆ.**

ಮೈಸೂರು ಕಾಗದ ಕಾರ್ಖಾನೆಯು 1937ರಲ್ಲಿ ಪ್ರಾರಂಭಿಸಿದ ಕೈಗಾರಿಕೆಯಾಗಿದ್ದು, ಯಂತ್ರಗಳು ಮತ್ತು ತಾಂತ್ರಿಕತೆಯು ಹಳೆಯದಾಗಿದ್ದು, ಮೈಸೂರು ಕಾಗದ ಕಾರ್ಖಾನೆಯು ಸತತವಾಗಿ ನಷ್ಟದಲ್ಲಿದ್ದುದರಿಂದ ರೋಗಗ್ರಸ್ಥ ಕಾರ್ಖಾನೆ ಎಂದು ಬಿ.ಐ.ಎಫ್.ಆರ್.ನಲ್ಲಿ ನೋಂದಾಯಿಸಲಾಗಿರುತ್ತದೆ. ಪ್ರಸ್ತುತ ಅಂದಾಜು ನಷ್ಟ ರೂ.1351.21 ಕೋಟಿಗಳಷ್ಟು (ಲೆಕ್ಕ ಪರಿಶೋಧನೆಗೆ ಒಳಪಡದ) ಇರುತ್ತದೆ. ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಾಗಿದ್ದು, ಮಾರುಕಟ್ಟೆ ಏರಿಳಿತ ಹಾಗೂ ಸಿಬ್ಬಂದಿ ವೆಚ್ಚ ಸಾಮಾನ್ಯವಾಗಿ ಶೇಕಡ 8 ರಿಂದ 10 ಇರಬೇಕಾಗಿದ್ದು, ಕಾರ್ಖಾನೆಯ ಸಿಬ್ಬಂದಿ ವೆಚ್ಚ ಶೇಕಡ 30ಕ್ಕಿಂತ ಹೆಚ್ಚಾಗಿರುತ್ತದೆ. ಹಾಗೂ ಹಳೆಯ ತಂತ್ರಜ್ಞಾನ, ಈ ಎಲ್ಲಾ ಕಾರಣಗಳಿಂದ ಕಾರ್ಖಾನೆಯು ನಷ್ಟಕ್ಕೊಳಗಾಗಿದೆ.

ಅಲ್ಲದೆ, ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಸಂಸ್ಥೆಯು ಕಾರ್ಖಾನೆಯು ಪರಿಸರಕ್ಕೆ ಸಂಬಂಧಿಸಿದಂತೆ ಯಾವುದೇ ಸರಿಯಾದ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ಕಾರ್ಖಾನೆಯನ್ನು ಮುಚ್ಚಲು ಆದೇಶವನ್ನು ನೀಡಿತ್ತು. ಈ ಆದೇಶದನ್ವಯ ದಿನಾಂಕ: 21.11.2015 ರಿಂದ ಕಾರ್ಖಾನೆಯ ಎಲ್ಲಾ ಉತ್ಪಾದನಾ ಚಟುವಟಿಕೆಗಳನ್ನು ನಿಲ್ಲಿಸಲಾಗಿದೆ ಮತ್ತು ಸಕ್ಕರೆ ಉತ್ಪಾದನೆಯನ್ನು ಮಾರ್ಚ್-2016ರಲ್ಲಿ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಯಿತು. ಆನಂತರ ಕಾರ್ಖಾನೆಯ ನೌಕರರಿಗೆ ಸರ್ಕಾರದ ಆದೇಶ ದಿನಾಂಕ: 04.01.2017ರಂತೆ ವಿ.ಆರ್. ಎಸ್./ವಿ.ಎಸ್.ಎಸ್ ಯೋಜನೆಯನ್ನು ಜಾರಿಗೊಳಿಸಲಾಯಿತು.

ಸಕ್ಷಮ ಪ್ರಾಧಿಕಾರ ಅಂದರೆ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ, ಇವರು ದಿನಾಂಕ : 07.10.2021ರ ಅಂತಿಮ ಆದೇಶದಲ್ಲಿ ಉತ್ಪಾದನಾ ಚಟುವಟಿಕೆಗಳನ್ನು ಮುಚ್ಚಲು ಅನುಮತಿ ನೀಡಲಾಗಿದ್ದು. ತತ್ಸಂಬಂಧವಾಗಿ, ಕಾರ್ಖಾನೆಯಿಂದ 202 ಉದ್ಯೋಗಿಗಳಿಗೆ ಮುಚ್ಚುವಿಕೆ

ಪರಿಹಾರ ಹಾಗೂ ಇತರೆ ನಿವೃತ್ತಿ ಸೌಲಭ್ಯಗಳನ್ನು ಆ ಕಾರ್ಮಿಕರ/ಉದ್ಯೋಗಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ.

**2. ಖಾಸಗೀಕರಣ ಮಾಡಲು ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿ ಎರಡು ವರ್ಷಗಳಾಗಿರುವ ಬಗ್ಗೆ.**

ಎಂಪಿಎಂ ಲಿಮಿಟೆಡ್‌ನ ಪುನರ್ವಸತಿ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಆರ್‌ಎಫ್‌ಕ್ಯೂ (Request for Qualification) ಅನ್ನು ದಿನಾಂಕ : 18.4.2017 ರಲ್ಲಿ ಸರ್ಕಾರದ ಇ-ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡುವ ಮೂಲಕ ಟೆಂಡರ್ ಆಹ್ವಾನಿಸುವ ಸೂಚನೆಯನ್ನು ನೀಡಲಾಗಿತ್ತು. ಕಾರ್ಯಾಚರಣೆಗಳನ್ನು ಗುತ್ತಿಗೆಗೆ ನೀಡುವುದಕ್ಕಾಗಿ ಭಾರತದ ವಿವಿಧ ಪ್ರಮುಖ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು. ಇ-ಟೆಂಡರ್ ತೆರೆದ ನಂತರ ಆರ್‌ಎಫ್‌ಕ್ಯೂಗೆ ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ ಮತ್ತೊಮ್ಮೆ ಆರ್‌ಎಫ್‌ಕ್ಯೂ ಗಾಗಿ ಬಿಡ್‌ಗಳನ್ನು ಆಹ್ವಾನಿಸುವ ಸಾಧ್ಯತೆಯನ್ನು ಅನ್ವೇಷಿಸಲು ದಿನಾಂಕ: 21.06.2018 ರಲ್ಲಿ ಮರು-ಟೆಂಡರ್ ಮಾಡಲಾಯಿತು ಮತ್ತು ಗಡುವು ದಿನಾಂಕವನ್ನು ನಿಯತಕಾಲಿಕವಾಗಿ ವಿಸ್ತರಿಸಲಾಯಿತು. ಯಾವುದೇ ಪ್ರತಿಕ್ರಿಯೆ ಇಲ್ಲದ ಕಾರಣ ಮಾರ್ಚ್ 2019 ರಲ್ಲಿ ಅದನ್ನು ಹಿಂಪಡೆಯಲಾಗಿದೆ.

ಆರ್‌ಎಫ್‌ಕ್ಯೂ (Request for Qualification) ಅನ್ನು ಕಂಪನಿಯು ಮೊದಲೇ ಅಪ್‌ಲೋಡ್ ಮಾಡಿದ್ದು ಮತ್ತು ಆರ್‌ಎಫ್‌ಕ್ಯೂ ಗಾಗಿ ಈಗಾಗಲೇ ವ್ಯಾಪಕ ಪ್ರಚಾರವನ್ನು ನೀಡಲಾಗಿರುವುದರಿಂದ ಪ್ರಸ್ತಾವನೆಗಾಗಿ ವಿನಂತಿ (Request for Proposal) ಯನ್ನು ನೇರವಾಗಿ ಅಪ್‌ಲೋಡ್ ಮಾಡಲು ನಿರ್ಧರಿಸಲಾಯಿತು. ಕಂಪನಿಯು ನಿರೀಕ್ಷಿತ ಬಿಡ್ ದಾರರು ಕೇಳಿರುವ ಸಲಹೆಗಳು / ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರ ದಿನಾಂಕ: 1.9.2020 ರಲ್ಲಿ ಆರ್‌ಎಫ್‌ಪಿ ಅನ್ನು ಅಪ್‌ಲೋಡ್ ಮಾಡಿದೆ. ಕಂಪನಿಯು ಅಪ್ ಲೋಡ್ ಮಾಡಿದ RFP ಅನ್ನು ಹಿಂಪಡೆದು ನಂತರ ದಿನಾಂಕ: 25.11.2020 ರಂದು ಹೊಸದಾಗಿ ಅಪ್ ಲೋಡ್ ಮಾಡಲಾಗಿದ್ದು, ಕೊನೆಯ ದಿನಾಂಕ : 28.01.2021ಕ್ಕೆ ವಿಸ್ತರಿಸಲಾಯಿತು. ಪರಿಷ್ಕೃತ ದಿನಾಂಕದಂದು ಇ-ಟೆಂಡರ್ ತೆರೆದಾಗ ಯಾವುದೇ ಬಿಡ್ ಗಳು ಸ್ವೀಕೃತವಾಗಿರುವುದಿಲ್ಲ. ಕಂಪನಿಯ ಆರ್‌ಎಫ್‌ಪಿ ನಂತರ ಯಾವುದೇ ಪ್ರತಿಕ್ರಿಯೆಗಳು ಕಂಡುಬಂದಿಲ್ಲವೆಂದು ಪರಿಗಣಿಸಿ ಆರ್‌ಎಫ್‌ಕ್ಯೂ ಪ್ರಕ್ರಿಯೆಗಳನ್ನು ಸದ್ಯದ ಪರಿಸ್ಥಿತಿಯಲ್ಲಿ ತಡೆಹಿಡಿಯಲಾಗಿರುತ್ತದೆ.

**3. ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಕಾಗದ ತಯಾರಿಕೆಗೆ ಯೋಗ್ಯವಾದ ಮರದ ತುಂಡುಗಳು ಕಂಪನಿಯ ಆವರಣದಲ್ಲಿ ಗೆದ್ದಲು ಹಿಡಿಯುತ್ತಿರುವ ಬಗ್ಗೆ :**

ಸರ್ಕಾರದ ಆದೇಶ ದಿನಾಂಕ : 04.01.2017 ರಂತೆ ಹಾಗೂ ಕಾರ್ಖಾನೆಯ ಆಡಳಿತ ಮಂಡಳಿಯ ಒಪ್ಪಿಗೆಯಂತೆ ಕಾರ್ಖಾನೆಯ ಅರಣ್ಯ ಪ್ರದೇಶದಲ್ಲಿ ಬೆಳೆದಿದ್ದ Pulp Wood ಗಳನ್ನು ಮಾರಾಟ ಮಾಡಲು ಒಪ್ಪಿಗೆ ನೀಡಲಾಗಿದೆ. ಜೊತೆಗೆ ಕಾರ್ಖಾನೆಯ ಆವರಣದಲ್ಲಿ ಸಂಗ್ರಹವಾಗಿದ್ದ Pulp Wood ಅನ್ನು ಸಹ ಮಾರಾಟಕ್ಕೆ ಒಪ್ಪಿಗೆ ನೀಡಲಾಗಿದೆ. ಕೆ.ಟಿ.ಪಿ.ಪಿ. ಕಾಯ್ದೆಯ ಅಡಿಯಲ್ಲಿ ದಿನಾಂಕ : 30.06.2017 ರಿಂದ ಟೆಂಡರ್ ಪ್ರಕ್ರಿಯೆಯು ಪ್ರಾರಂಭವಾಗಿರುತ್ತದೆ. ಕಾರ್ಖಾನೆಯಲ್ಲಿ ಸಂಗ್ರಹವಾಗಿದ್ದ ಮರದ ತುಂಡುಗಳ ಪರಿಮಾಣ 27,000 ಎಂ.ಟಿ (MT) ಅನ್ನು ಮೆ. ಶ್ರೀ ರಾಜರಾಜೇಶ್ವರಿ ಕಂ., ಬೆಂಗಳೂರು, ಇವರಿಗೆ ದಿನಾಂಕ:

28.7.2017ರಂದು ವರ್ಕ್ ಆರ್ಡರ್ ಅನ್ನು (ಕಾರ್ಯಾದೇಶ) ನೀಡಲಾಗಿರುತ್ತದೆ. ನಂತರ ಸದರಿ ಕಂಪನಿಯವರು ಹಂತ ಹಂತವಾಗಿ ಒಟ್ಟು 22,081 ಎಂ.ಟಿ. (MT) ತಿರುಳು ಮರದ ತುಂಡುಗಳನ್ನು ತೆಗೆದುಕೊಂಡು ಹೋಗಿದ್ದು, ತತ್ಸಂಬಂಧ ಹಣವನ್ನು ಕಾರ್ಖಾನೆಗೆ ಸಂದಾಯ ಮಾಡಿರುತ್ತಾರೆ. ಸಧ್ಯಕ್ಕೆ ಕಂಪನಿಯ ಆವರಣದಲ್ಲಿ ಸುಮಾರು 4,911 ಎಂ.ಟಿ. (MT) ತಿರುಳು ಮರದ ತುಂಡುಗಳ ಪರಿಮಾಣವಿರುತ್ತದೆ. ಟೆಂಡರ್ ದಾರರು ಜಿ.ಎಸ್.ಟಿ.ಗೆ ಸಂಬಂಧಪಟ್ಟ ಕೆಲವು ಗೊಂದಲಗಳ ಹಿನ್ನಲೆಯಲ್ಲಿ, ಮರದ ತುಂಡುಗಳನ್ನು ಸಾಗಿಸಲಿಲ್ಲವಾದ್ದರಿಂದ ಕಾರ್ಖಾನೆಯು ಇವರಿಗೆ ನೀಡಿದ ಕಾರ್ಯಾದೇಶವನ್ನು ಹಿಂಪಡೆಯಿತು.

ಇದಕ್ಕೆ ವಿರುದ್ಧವಾಗಿ ಟೆಂಡರ್ ದಾರರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದರು. ಇವರ ಮನವಿಯನ್ನು ಮನ್ನಿಸಿ ಮಾನ್ಯ ಉಚ್ಚ ನ್ಯಾಯಾಲಯವು ಕಾರ್ಖಾನೆಯು ತೆಗೆದುಕೊಂಡ ಕ್ರಮಕ್ಕೆ ತಡೆಯಾಜ್ಞೆಯನ್ನು ನೀಡಿತು. ಸದರಿ ಟೆಂಡರ್ ದಾರರು ಜಿ.ಎಸ್.ಟಿ.ಗೆ ಸಂಬಂಧಿಸಿದ ಗೊಂದಲಗಳನ್ನು ಪರಿಹರಿಸಿಕೊಂಡು ಅವರು ಹೂಡಿದ ದಾವೆಯನ್ನು ಹಿಂಪಡೆದು ನಂತರದ ದಿನಗಳಲ್ಲಿ ಮರದ ತುಂಡುಗಳನ್ನು ಸಾಗಿಸಲು ಪ್ರಾರಂಭಿಸಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಾದೇಶ ನೀಡುವಾಗ ಮೆ. ಶ್ರೀ ರಾಜರಾಜೇಶ್ವರಿ ಕಂ., ಬೆಂಗಳೂರು, ಇವರಿಂದ ಸೆಕ್ಯುರಿಟಿ ಡಿಪಾಸಿಟ್ ಆಗಿ ರೂ.1.07 ಕೋಟಿಗಳನ್ನು ಪಡೆಯಲಾಗಿದೆ ಮತ್ತು ಇವರು ಮುಂದಿನ ವಿಲೇವಾರಿಗಾಗಿ 25.00 ಲಕ್ಷ ರೂ. ಮುಂಗಡ ಹಣ ಪಾವತಿ ಮಾಡಿರುತ್ತಾರೆ. ಒಂದು ವೇಳೆ ಸದರಿ ಟೆಂಡರ್ ದಾರರು ಮರದ ತುಂಡುಗಳನ್ನು ವಿಲೇವಾರಿ ಮಾಡಲು ವಿಫಲವಾದರೆ ಅವರ ಮುಂಗಡ ಹಾಗು ಸೆಕ್ಯುರಿಟಿ ಡೆಪಾಸಿಟ್ ಹಣವನ್ನು ಕಂಪನಿಯು ಮುಟ್ಟುಗೋಲು ಹಾಕಿಕೊಂಡು ನಂತರ ಉಳಿದ ಪಲ್ಪ್ ವುಡ್ ಅನ್ನು ಮರು ಟಂಡರ್ ಪ್ರಕ್ರಿಯೆಗೆ ಒಳಪಡಿಸಲಾಗುವುದು.

**4. ಕಾರ್ಖಾನೆಗೆ ಪೂರಕ ಕಚ್ಚಾ ವಸ್ತು ಸರಬರಾಜಿಗೆ (ಕಬ್ಬಿನ ಸಿಪ್ಪೆ) ಸ್ಥಾಪಿಸಿದ ಸಕ್ಕರೆ ಕಾರ್ಖಾನೆಯು ಸ್ಥಗಿತವಾಗಿ ಕಬ್ಬು ಬೆಳೆಯುತ್ತಿರುವವರಿಗೂ ತೊಂದರೆಯಾಗಿರುವ ಬಗ್ಗೆ :**

2015-16 ರಲ್ಲಿ 5,349 ಎಕರೆಗಳಲ್ಲಿ ಬೆಳೆದ 1,60,000 ಮೆ.ಟನ್ ಗಳಷ್ಟು ಸರಬರಾಜಾದ ಕಬ್ಬನ್ನು ಕಾರ್ಖಾನೆಯಲ್ಲಿ ಅರೆಯಲಾಯಿತು. ಕಾಗದ ಉತ್ಪಾದನೆಯನ್ನು ನವೆಂಬರ್ 2015 ಹಾಗು ಸಕ್ಕರೆ ಉತ್ಪಾದನೆಯನ್ನು ಮಾರ್ಚ್ 2016 ರಂದು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಯಿತು. ರೈತರ ಮನವಿ ಹಾಗು ಸರ್ಕಾರದ ಆದೇಶದಂತೆ 2016-17 ರಲ್ಲಿ ಕಾರ್ಖಾನೆಯ ಒಪ್ಪಿಗೆಯ ಮೇರೆಗೆ ರೈತರು ಬೆಳೆದ ಕಬ್ಬನ್ನು, ಹತ್ತಿರದ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡುವಂತೆ ಆದೇಶಿಸಿ, ಒಂದು ವರ್ಷಕ್ಕೆ ಸೀಮಿತವಾಗಿ ಒಟ್ಟು ತಗುಲಿದ ಸಾರಿಗೆ ವೆಚ್ಚ ರೂ.48.00 ಲಕ್ಷಗಳನ್ನು ರೈತರಿಗೆ ನೀಡಲಾಗಿದೆ.

ಸಿಐ 13 ಸಿಎಂಐ 2023(ಇ)

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು.